# ಅಡಗಿದ ಅಹಂಕಾರ

ಒಂದು ಊರಿನಲ್ಲಿ ಒಬ್ಬ ನೇಕಾರನಿದ್ದ. ಶಾಂತ ಸ್ವಭಾವದ ಮನುಷ್ಯ. ನಿಗರ್ವಿ, ತುಂಬಾ ಪ್ರಾಮಾಣಿಕ, ಆತ ಸಿಟ್ಟಾಗಿದ್ದನ್ನು ಆ ಊರಿನಲ್ಲಿ ಯಾರೂ ನೋಡೇ ಇರಲಿಲ್ಲ. ಆ ಊರಿನ ಕೆಲ ಯುವಕರಿಗೆ ಒಂದು ದಿನ ತರಲೆ ಹೊಳೆಯಿತು. ನೇಕಾರನಿಗ ಸಿಟ್ಟು ಬರಿಸಬೇಕೆಂದು ಅವರು ಮಾತಾಡಿಕೊಂಡರು. ಒಂದು ದಿನ ಆ ಯುವಕರ ಗುಂಪು ನೇಕಾರನ ಅಂಗಡಿಗೆ ಆಗಮಿಸಿತು. ಆ ಯುವಕರ ನಾಯಕ ಶ್ರೀಮಂತ ವ್ಯಾಪಾರಿಯೊಬ್ಬನ ಮಗನಾಗಿದ್ದ. ಅವರು ನೇಕಾರನ ಅಂಗಡಿಯಲ್ಲಿ ಒಂದು ಬೆಲೆ ಬಾಳುವ ಸೀರೆಯನ್ನು ಆಯ್ಕೆ ಮಾಡಿ ಅದರ ಬೆಲೆ ವಿಚಾರಿಸಿದ.

ನೇಕಾರ ಆ ಸೀರೆಗೆ 10 ನಾಣ್ಯಗಳ ಬೆಲೆ ಕಟ್ಟಿದ. ನೇಕಾರನನ್ನು ಛೇಡಿಸುವ ಉದ್ದೇಶದಿಂದ ಆ ಶ್ರಿಮಂತ ಯುವಕ ನನಗೆ ಪೂರ್ಣ ಸೀರೆ ಬೇಡ, ಅರ್ಧ ಸಾಕು ಎನ್ನುತ್ತ ಸೀರೆಯನ್ನು ಹರಿದು ಎರಡು ಭಾಗ ಮಾಡಿ ಒಂದು ಭಾಗದ ಬೆಲೆ ವಿಚಾರಿಸಿದ. ನೌಕರ ಶಾಂತ ಚಿತ್ತದಿಂದ ಆ ಅರ್ಧ ಸೀರೆಯ ಬೆಲೆ 5 ನಾಣ್ಯಗಳು ಎಂದು ಉತ್ತರಿಸಿದ.

ಯುವಕ ಮತ್ತೆ ಆ ಸೀರೆಯನ್ನು ಎರಡು ಭಾಗ ಮಾಡಿ ಒಂದು ಭಾಗ ಸಾಕು ಅದರ ಬೆಲೆ ಹೇಳು ಎಂದು ನೇಕಾರನನ್ನು ಕೆಣಕಿದ. ನೇಕಾರ ಕೊಂಚವೂ ವಿಚಲಿತನಾಗದೆ ಸೀರೆಯ ಬೆಲೆ ಎರಡು ಎರಡು ನಾಣ್ಯಗಳು ಎಂದು ಉತ್ತರಿಸಿದ. ಹೀಗೆ ಆ ಯುವಕ ಸೀರೆಯನ್ನು ತುಂಡು ಮಾಡುತ್ತಲೆ ಹೋದ. ಕೊನೆಗೆ 'ಈ ಸೀರೆ ನನಗೀಗ ಯಾವ ಉಪಯೋಗಕ್ಕೂ ಬಾರದು' ಎಂದು ಕೈ ಚೆಲ್ಲಿದ.

ಆಗ ನೇಕಾರ 'ಹುಡುಗ ಈಗ ಈ ಸೀರೆ ನಿನಗಷ್ಟೆ ಅಲ್ಲ, ಯಾರ ಉಪಯೋಗಕ್ಕೂ ಬಾರದು' ಎಂದು ಶಾಂತ ಚಿತ್ತದಿಂದ ಮಾತನಾಡಿದ. ಇಷ್ಟಾದರೂ ನೇಕಾರ ಸಿಟ್ಟಿಗೇಳದ್ದನ್ನು ಕಂಡು ಆ ಯುವಕನಿಗೆ ನಾಚಿಕೆಯಾಯಿತು. 'ಕ್ಷಮಿಸಿ ನನ್ನಿಂದಾಗಿ ನಿಮಗೆ ನಷ್ಟವಾಯಿತು. ದಯವಿಟ್ಟು ಸೀರೆಯ ಪೂರ್ತಿ ಬೆಲೆಯನ್ನು ನನ್ನಿಂದ ಸ್ವೀಕರಿಸಿ' ಎಂದು ಮನವಿ ಮಾಡಿಕೊಂಡ. 'ನೀನು ನನ್ನಿಂದ ಸೀರೆ ಕೊಂಡಿಲ್ಲ, ಆದ್ದರಿಂದ ನಿನ್ನಿಂದ ನಾನು ಹಣ ಪಡೆಯಲಾರೆ' ಎಂದು ನೌಕರ ಹಣ ಸ್ವಿಕರಿಸಲು ನಿರಾಕರಿಸಿದ.

ನೇಕಾರನ ಈ ಮಾತು ಕೇಳುತ್ತಲೆ ಆ ಯುವಕನ ಅಹಂಗೆ ಪೆಟ್ಟು ಬಿದ್ದಿತು. 'ನಾನು ಶ್ರೀಮಂತನ ಮಗ ಹಣ ಕೊಟ್ಟರೆ ನನಗೇನೂ ಅಂತಹ ವ್ಯತ್ಯಾಸವಾಗುವುದಿಲ್ಲ, ಆದರೆ ನೀನು ಬಡವ ಈ ನಷ್ಟವನ್ನು ಹೇಗೆ ಭರಿಸುತ್ತೀಯಾ? ನಿನ್ನ ನಷ್ಟಕ್ಕೆ ನಾನು ಕಾರಣನಾಗಿದ್ದೇನೆ ಆದ್ದರಿಂದ ಅದರ ಹೊಣೆಯೂ ನನ್ನದೆ' ಎಂದು ಕೇಳಿಕೊಂಡ.

ನೇಕಾರ ನಗುತ್ತ ಮಾತನಾಡಿದ 'ಹುಡುಗ ನೀನು ನನಗಾದ ನಷ್ಟವನ್ನು ಭರಿಸಲಾರೆ. ಒಮ್ಮೆ ಯೋಚಿಸು, ಹತ್ತಿ ಬೆಳೆಯಲು ರೈತ ಎಷ್ಟ ಶ್ರಮವಹಿಸಿದ್ದಾನೆ, ಆ ಹತ್ತಿಯಿಂದ ನೂಲು ತೆಗೆಯುವಲ್ಲಿ, ಸೀರೆ ನೇಯುವಲ್ಲಿ, ಬಣ್ಣ ಹಾಕುವಲ್ಲಿ ನನ್ನ ಮತ್ತು ನನ್ನ ಹೆಂಡತಿಯ ಎಷ್ಟು ಬೆವರು ಹರಿದಿದೆ. ಇಷ್ಟು ಶ್ರಮ ಸಾರ್ಥಕವಾಗುವುದು ಈ ಸೀರೆಯನ್ನು ಯಾರಾದರೂ ಉಟ್ಟು ಸಂತೋಷಪಟ್ಟಾಗ ಮಾತ್ರ. ಆದರೆ ನೀನು ಸೀರೆಯನ್ನು ತುಂಡು ಮಾಡಿಬಿಟ್ಟೆ. ಕೇವಲ ಹಣ ಕೊಡುವುದರಿಂದ ನೀನು ಈ ನಷ್ಟವನ್ನು ತುಂಬಿಕೊಡಲಾರೆ' ನೇಕಾರನ ದನಿಯಲ್ಲಿ ಆಕ್ರೋಶದ ಬದಲಾಗಿ ಸೌಮ್ಯಭಾವ ಮತ್ತು ಅಂತಃಕರಣವಿತ್ತು.

ಆ ಶ್ರೀಮಂತ ಯುವಕ ತಲೆತಗ್ಗಿಸಿದ, ಅವನ ಕಣ್ಣುಗಳು ತುಂಬಿ ಬಂದವು. ನೇಕಾರನ ಕಾಲು ಹಿಡಿದು ಬಿಕ್ಕತೊಡಗಿದ. ನೇಕಾರ ಪ್ರೀತಿಯಿಂದ ಆ ಯುವಕನನ್ನು ಎಬ್ಬಿಸಿ ಅಪ್ಪಿಕೊಂಡು ಮಾತನಾಡಿದ. 'ಮಗು ನಾನು ನಿನ್ನಿಂದ ಹಣ ಪಡೆದುಕೊಂಡಿದ್ದರೆ ನನಗೇನೋ ಉಪಯೋಗವಾಗುತ್ತಿತ್ತು. ಆದರೆ ನಿನ್ನ ಬದುಕಿನಲ್ಲಿ ಯಾವ ಬದಲಾವಣೆ ಆಗುತ್ತಿರಲಿಲ್ಲ. ಸೀರೆ ಒಂದು ಹೋದರೆ ಇನ್ನೊಂದು ಬರಬಹುದು, ಆದರೆ ಈ ಬದುಕು ಇರುವುದೊಂದೆ. ಈ ಬದುಕು ಅಹಂಕಾರದಿಂದ ನಷ್ಟವಾದರೆ ಇನ್ನೊಂದು ಬದುಕನ್ನು ಎಲ್ಲಿಂದ ತರೋದು? ನಿನ್ನ ಪಶ್ಚಾತ್ತಾಪವೇ ನನ್ನ ಬಳುವಳಿ.

ತನ್ನ ಅಂತಃಕರಣ, ತಿಳಿವಳಿಕೆಯಿಂದ ಆ ಶ್ರೀಮಂತ ಯುವಕನ ಕಣ್ಣು ತೆರೆಸಿದ ನೇಕಾರ ಯಾರು ಗೊತ್ತೆ? ಎಂದು ಸಂತ ಕಬೀರ ಸಾಂತ್ವನ ಹೇಳಿದರು.

■ ಸಂಗ್ರಹ: **ಸಿದ್ದಮ್ಮ ವಿ. ಪಾಟೀಲ**
**ಹರಪನಹಳ್ಳಿ**

